ದಿನಾಂಕ: ಫೆಬ್ರವರಿ 22, 2013

**ಹೈದರಾಬಾದ್ ಭಯೋತ್ಪಾದನಾ ಕೃತ್ಯದ ಬಗ್ಗೆ ಸುಶೀಲ್ ಕುಮಾರ್ ಶಿಂಧೆಯವರು ರಾಜ್ಯಸಭೆಯಲ್ಲಿ ನೀಡಿದ ಹೇಳಿಕೆಗೆ ರಾಜ್ಯ ಸಭಾ ವಿರೋಧ ಪಕ್ಷದ ನಾಯಕ ಶ್ರೀ ಅರುಣ್ ಜೇಟ್ಲಿಯವರು ಮಾಡಿದ ಪ್ರತಿಕ್ರಿಯಾ ಭಾಷಣ**

ಮಾನ್ಯ ಉಪಾಧ್ಯಕ್ಷ ಮಹೋದಯ, ನಿನ್ನೆ ಹೈದರಾಬಾದಿನಲ್ಲಿ ಸಂಭವಿಸಿದ ಎರಡು ಬಾಂಬ್ ಸ್ಫೋಟಗಳು ಭಾರತದ ಸಾರ್ವಭೌಮತೆ ಹಾಗೂ ವ್ಯಕ್ತಿತ್ವಕ್ಕೆ ಒಡ್ಡಿದ ಗಂಭೀರ ಸವಾಲಾಗಿದೆ. ಕಳೆದ ಎರಡು ದಶಕಗಳಲ್ಲಿ ಇಂತಹ ಹಲವಾರು ಘಟನೆಗಳನ್ನು ಕಂಡಿದ್ದೇವೆ. ಕಳೆದ ಕೆಲವು ತಿಂಗಳಲ್ಲಿ ಇಂತಹ ಘಟನೆಗಳ ಪ್ರಖರತೆ ತಗ್ಗಿದೆ ಎಂಬ ಭಾವನೆ ನಮ್ಮದಾಗಿತ್ತು, ನಿನ್ನೆ ಬೆಳಿಗ್ಗೆ ಮಾನ್ಯ ರಾಷ್ಟ್ರಪತಿಗಳು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆದರೆ, ದುರಾದೃಷ್ಟವಷಾತ್, ಸಂಸತ್‌ನ ಬಜೆಟ್ ಅಧಿವೇಶನ ಆರಂಭವಾದ ಮೊದಲ ದಿವಸವನ್ನೇ ಆಯ್ಕೆ ಮಾಡಿಕೊಂಡ ಆತಂಕವಾದಿಗಳು, ಭಾರತ ಈಗಲೂ ತಮ್ಮ ಆತಂಕದ ಛಾಯೆಯಲ್ಲಿ ಬದುಕಬೇಕಿದೆ ಎಂಬ ಕಠೋರ ನೆನಪನ್ನು ಇಡೀ ದೇಶಕ್ಕೆ ಮಾಡಿಕೊಟ್ಟಿದ್ದಾರೆ. ಒಂದು ರಾಷ್ಟ್ರವಾಗಿ ನಮ್ಮ ಪ್ರಭುದ್ದತೆಗೆ ಸವಾಲು ಒಡ್ಡಲಾಗಿದ್ದು, ನಾವೆಲ್ಲರು ಒಂದೇ ಅಭಿಮತವನ್ನು ವ್ಯಕ್ತಪಡಿಸುವ, ಒಂದೇ ದಿಕ್ಕಿನಲ್ಲಿ ಆಲೋಚಿಸುವ ಹಾಗೂ ಭಾರತದಲ್ಲಿ ಇಂತಹ ಘಟನೆ ಮರುಕಳಿಸದಂತೆ ನಿಶ್ಚಯಿಸುವ ಅವಶ್ಯಕತೆಯಿದೆ. ಹಲವಾರು ಅಮಾಯಕರು ತಮ್ಮ ಜೀವ ಕಳೆದುಕೊಂಡಿದ್ದಾರೆ. ಹಲವರು ಮಾರಣಾಂತಕ ಗಾಯಗಳಿಂದ ನೋವನುಭವಿಸಿದ್ದಾರೆ. ರಾಷ್ಟ್ರದ ನಿಜವಾದ ಉದ್ದೇಶ ಹಾಗೂ ಆಲೋಚನಾ ಲಹರಿ, ವಿಶೇಷವಾಗಿ ಸರ್ಕಾರ ತೆಗೆದುಕೊಳ್ಳುವ ನಿಲುವು ಹಾಗೂ ಈಗ ನಮ್ಮಗಳ ಮುಂದಿರುವ ನಿಜವಾದ ಪ್ರಶ್ನೆಯೆಂದರೆ:

ಮುಂದೆ ಸಂಭವಿಸಬಹುದಾದ ಮತ್ತೊಂದು ಧಾಳಿಯವರೆಗೂ ಕಾಯಬೇಕೆ? ಆತಂಕವಾದ ಕುರಿತಂತೆ ಇದೇ ಕಡೆ ಘಾತಕ ಧಾಳಿ ಎಂದು ಪರಿಗಣಿಸುವ ರೀತಿಯಲ್ಲಿ ನಮ್ಮ ಇಡೀ ದೇಶವನ್ನು ಸಜ್ಜುಗೊಳಿಸಬೇಕೇ? ಮಾನ್ಯರೆ, ಗೃಹ ಸಚಿವರು ನೀಡಿದ ಹೇಳಿಕೆಯ ಹಿನ್ನಲೆಯಲ್ಲಿ ಅವರಿಗೆ ಕೆಲವು ಸಲಹೆಗಳನ್ನು ಹಾಗೂ ಕೆಲವು ಸ್ಪಷ್ಟನೆಗಳನ್ನು ಪಡೆಯುವ ಉದ್ದೇಶದಿಂದ ಅವರಿಗೆ ಕೆಲವು ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ಮಾನ್ಯರೆ, ಇತ್ತೀಚೆಗೆ ನಡೆದ ಎರಡು ಗಲ್ಲು ಶಿಕ್ಷೆಯ ನಂತರ, ಯಾವುದೋ ಒಂದು ಬಗೆಯ ಪ್ರತಿಕ್ರಿಯೆ ಆಥವಾ ಸಮಸ್ಯೆ ಉದ್ಭವಿಸುವ ಸಾಧ್ಯತೆಯಿತ್ತು. ಅಪೇಕ್ಷಿತ ಪ್ರತಿಗಾಮಿ ಕೃತ್ಯವನ್ನು ತಡೆಯಲು ಸರ್ಕಾರ ಸಿದ್ಧವಾಗಿತ್ತೆ? ಅಥವಾ, ನಿನ್ನೆ ಸಂಜೆ ಸಂಭವಿಸಿದ ಘಟನೆಯ ನಂತರವೇ ನಾವು ಎಚ್ಚೆತ್ತುಕೊಂಡೆವೇ? ಮಾನ್ಯರೆ, ಹೈದರಾಬಾದ್ ಮತ್ತು ಬೆಂಗಳೂರು ಕೂಡ ಸೇರಿದಂತೆ ಕೆಲವು ನಗರಗಳಲ್ಲಿ ಕೃತ್ಯಗಳು ಸಂಭವಿಸುವ ಸಾಧ್ಯತೆ ಕುರಿತು, ಮಾಧ್ಯಮಗಳು ಕಳೆದ ಕೆಲವು ದಿವಸಗಳಿಂದ, ಮಾಹಿತಿ ನೀಡುತ್ತಿದ್ದವು. ಕೆಲವು ಪ್ರಚೋದನಕಾರಿ ಭಾಷಣದಿಂದ ಹೈದರಾಬಾದ್ ವಾತಾವರಣ ಉದ್ವಿಗ್ನಗೊಂಡಿತ್ತು. ಕೃತ್ಯ ಸಂಭವಿಸುವ ಸಂಕೇತಗಳು ಮಾಧ್ಯಮಗಳಲ್ಲಿ ಲಭ್ಯವಾಗುತ್ತಿರುವಾಗ–ನಿನ್ನೆ ಬೆಳಿಗ್ಗೆಯೂ ಸಹ ಮಾಧ್ಯಮಗಳು ಬಿತ್ತರಿಸಿದ ಮಾಹಿತಿಯಂತೆ, ಕೆಲವು ನಗರಗಳು ಆತಂಕದ ಪ್ರಭಾವಕ್ಕೆ ಒಳಗಾಗುವ ಸಾಧ್ಯತೆಯಿದೆ ಎಂದು ಎಚ್ಚರಿಸಿದಂತೆ, ಕೆಲವು ಪ್ರದೇಶಗಳಲ್ಲಿ ಕೆಲವರು ವಿಧ್ವಂಸಕ ಚಟುವಟಿಕೆಗಳಲ್ಲಿ

ತಲ್ಲೀನರಾಗಿದ್ದಾರೆ ಎಂಬುದು ಗೋಚರಿಸಬೇಕಿತ್ತು. ನಿಮಗೆ ಮಾಹಿತಿ ಸೂಚ್ಯವಾಗಿ ತಿಳಿದಾಗ–ಅದು ನಿಖರವಾದ ಮಾಹಿತಿ ಇಲ್ಲದೆಯಿರಬಹುದು ಅಥವಾ ಪ್ರತಿರೋಧ ಒಡ್ಡಬಲ್ಲ ಗುಪ್ತಚರ್ಯೆ ಮಾಹಿತಿಯಿಲ್ಲದೆ ಇರಬಹುದು; ಆದರೆ ಸಾಮಾನ್ಯ ಮಾಹಿತಿ ಲಭ್ಯವಿರುವಾಗ– ವಿಶೇಷವಾಗಿ ವಾತಾವರಣ ಕಲುಷಿತಗೊಂಡ ಹೈದರಾಬಾದಿನಲ್ಲಿ ಮತ್ತು ಆತಂಕದ ಭೀತಿಯಿದ್ದ ಎಲ್ಲಾ ನಗರಗಳಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಸಮರ್ಪಕ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತೆ? ಮಾನ್ಯರೆ, ನಮ್ಮ ಬೇಹುಗಾರಿಕೆ ಸಂಘಟನೆಗಳು ಆತಂಕವಾದದ ವ್ಯವಸ್ಥೆಯನ್ನು ಭೇದಿಸಲು ಎಷ್ಟು ಸಾಧ್ಯವೆಂಬ ಸವಾಲು ನಮ್ಮ ಮುಂದಿದೆ. ಕೆಲವರು ಗಡಿಯಾಚೆಗಿನ ಪ್ರಚೋದನೆಯಿಂದಾಗಿ ಮತ್ತು ಸಮಾಜಘಾತುಕ ಶಕ್ತಿಗಳ ಪ್ರಭಾವಕ್ಕೆ ಒಳಗಾದ ಕೆಲವು ಸ್ಥಳೀಯ ಯುವಕರ ಸಮೂಹ ಇಂತಹ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದ್ದಾರೆ. ಭಯೋತ್ಪಾದನೆಗೆ ಆಯ್ದುಕೊಳ್ಳುವ ಸ್ಥಳ ಹಾಗೂ ಸಮಯವನ್ನು ಅವರೇ ನಿರ್ಧರಿಸುವುದರಿಂದ, ಅವರ ಕುತಂತ್ರ ಫಲಿಸುತ್ತದೆ, ಮತ್ತು ನಾವು ಘಟನೆಯ ನಂತರ ಅಪರಾಧದ ತನಿಖೆ ಮಾಡಿ ಮುಗಿಸುತ್ತೇವೆ. ಜನರಿಗೆ ಸ್ವಲ್ಪ ಪರಿಹಾರ ಮತ್ತು ಸ್ವಲ್ಪ ನೆರವನ್ನು ನೀಡಬಹುದಷ್ಟೆ. ನಮ್ಮ ಬೇಹುಗಾರಿಕೆ ವಿಭಾಗವು ಇಂತಹ ವಿಧ್ವಂಸಕ ಯುವಕರ ಸಮೂಹಗಳನ್ನು ಭೇದಿಸುವುದರಲ್ಲೇ ನಿಜವಾದ ಶಕ್ತಿ ಅಡಗಿದೆ. ಈ ಸಮೂಹಗಳನ್ನು ಭೇದಿಸಿ ಅವುಗಳನ್ನು ನಾಶಗೊಳಿಸಬೇಕಾಗಿದೆ. ಕಳೆದ ಎರಡು ದಶಕಗಳಿಂದ ಇಂತಹ ಹಲವಾರು ಸಮೂಹಗಳನ್ನು ಧ್ವಂಸಗೊಳಿಸಲಾಗಿದೆ ಎಂದು ನಾನು ಯಾವುದೇ ಸಂದೇಹವಿಲ್ಲದೆ ಹೇಳಬಲ್ಲೆ. ಅದರೆ ಇವುಗಳಲ್ಲಿ ಕೆಲವನ್ನು ಪತ್ತೆ ಹಚ್ಚದೆಯಿರುವುದೇ ನಮ್ಮ ದೌರ್ಬಲ್ಯವನ್ನು ತೋರಿಸುತ್ತದೆ. ಇಂತಹ ವಿಧ್ವಂಸಕ ಸಮೂಹಗಳನ್ನು ಭೇದಿಸಿ ಧ್ವಂಸಗೊಳಿಸುವುದೇ ನಮ್ಮ ಶಕ್ತಿ ಮತ್ತು ಸಾಮರ್ಥ್ಯದ ನಿಜವಾದ ಪರೀಕ್ಷೆಯಾಗಿದ್ದು, ಬಾಂಬ್ ಸ್ಫೋಟಗಳಂತಹ ಘಟನೆಗಳು ಪುನರಾವರ್ತನೆ ಆಗದಿರಲು ಈ ಪರೀಕ್ಷೆಯಲ್ಲಿ ಸಫಲರಾಗುವುದು ಮುಖ್ಯ. ಮಾನ್ಯರೆ, ನಾನು ಸರ್ಕಾರಕ್ಕೆ ನೀಡಬಯಸುವ ಸಲಹೆಯೆಂದರೆ: ನಾವು ಆತಂಕವಾದದ ಹಲವು ವರ್ಣಗಳ ಕುರಿತು ಚರ್ಚಿಸಬಹುದು; ಆತಂಕವಾದದ ರಾಜಕೀಯ ಸ್ವರೂಪದ ಕುರಿತು ವಾದಿಸಬಹುದು, ಆದರೆ ಹೀಗೆ ಮಾಡಿದರೆ, ವ್ಯರ್ಥ ನಮ್ಮ ಕಂಠ ಶೋಷಣೆ ಮಾಡಿದಂತಾಗುತ್ತದೆ. ಅನ್ಯ ಕೆಲವು ರಾಷ್ಟ್ರಗಳಲ್ಲಿ ಇಂತಹ ಘಟನೆಗಳು ಸಂಭವಿಸಿದ ಕೂಡಲೆ, ಅವುಗಳು ಪುನರಾವರ್ತನೆಯಾಗದಂತೆ ತಮ್ಮ ಭದ್ರತಾ ವ್ಯವಸ್ಥೆಯನ್ನು ಈ ರಾಷ್ಟ್ರಗಳು ಬಲಪಡಿಸಿದ್ದು, ನಮ್ಮ ದೇಶದಲ್ಲೂ ಇಂತಹ ವ್ಯವಸ್ಥೆ ರೂಪಿಸಲು ಸಾಧ್ಯವಾಗದೆಯಿರಲು ಕಾರಣವೇನು ಎಂಬ ಪ್ರಶ್ನೆ ನಮ್ಮ ಸಮಾಜ ಅದರಲ್ಲೂ ವಿಶೇಷವಾಗಿ ನಮ್ಮ ಭಾರತೀಯ ಸರ್ಕಾರದ ಮುಂದಿದೆ. ಇಂತಹ ಒಂದು ಸದೃಢ ವ್ಯವಸ್ಥೆ ಸ್ಥಾಪಿಸಲು ಹಲವಾರು ಸಲಹೆಗಳನ್ನು ನೀಡಲಾಗಿದೆ. ಆದರೆ ಭಾರತಕ್ಕೆ ಅನ್ವಯವಾಗುವ ಲಕ್ಷಣಗಳು ಮತ್ತು ಸಂವೈಧಾನಿಕ ರಚನೆಯನ್ನು ನಾವು ಮನದಟ್ಟು ಮಾಡಿಕೊಳ್ಳಬೇಕಾಗಿದೆ. ಗಡಿಯಾಚೆಗಿನ ಗುಪ್ತಚರ್ಯೆ ನಿರ್ವಹಣೆ ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ. ರಾಜ್ಯಗಳ ಗಡಿದಾಟಿ ವ್ಯವಹರಿಸುವ ವಿಧ್ವಂಸಕ ಸಮೂಹಗಳನ್ನು ಭೇದಿಸುವ ಜವಾಬ್ದಾರಿಯನ್ನೂ ಸಹ ಕೇಂದ್ರ ಸರ್ಕಾರ ಹೊಂದಿದೆ. ಕಾನೂನು ಸುವ್ಯವಸ್ಥೆ ನೋಡಿಕೊಳ್ಳುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿದೆ. ಇದೇ ಭಾರತದ ರಾಜಕೀಯ ಒಕ್ಕೂಟ ವ್ಯವಸ್ಥೆ. ಆದ್ದರಿಂದಲೇ, ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಘಟನೆಯೊಂದೇ ಭಯೋತ್ಪಾದನಾ ನಿಗ್ರಹ ಕಾರ್ಯವನ್ನು ನಿರ್ವಹಿಸುತ್ತದೆ ಎಂದು ಹೇಳುವುದು ಸರಿಯಲ್ಲ. ಹೀಗಿರುವಾಗ ಕೇಂದ್ರ ಹಾಗೂ ರಾಜ್ಯ

ಸರ್ಕಾರಗಳ ಸಮನ್ವಯದಿಂದಲೇ ಇದು ಸಾಧ್ಯ. ರಾಜ್ಯಗಳ ಗುಪ್ತಚರ್ಯೆ ವಿಭಾಗ ಮತ್ತು ಕಾನೂನು ಸುವ್ಯವಸ್ಥೆಯ ಬಲವರ್ಧನೆಯಾಗಬೇಕಿದೆ. ಅದಕ್ಕಿಂತ ಮುಖ್ಯವಾಗಿ, ಜನಸಾಮಾನ್ಯರ ಸಂಪರ್ಕವಿರುವ ಪೋಲಿಸ್ ಪೇದೆ ಗುಪ್ತ ಮಾಹಿತಿಯನ್ನು ಅತ್ಯುತ್ತಮವಾಗಿ ಸಂಗ್ರಹಿಸಬಲ್ಲನು. ವಿಧ್ವಂಸಕ ಸಮೂಹಗಳ ಸುಳಿವು ಅರಿಯಲು ಅವನೇ ಯೋಗ್ಯ ವ್ಯಕ್ತಿ. ಆದ್ದರಿಂದಲೇ, ಆತಂಕವಾದದ ವಿರುದ್ಧದ ಕಾರ್ಯಾಚರಣೆಯನ್ನು ಕೇವಲ ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಯೊಂದೆ ನಿರ್ವಹಿಸಲು ಸಾಧ್ಯವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಮಾನ್ಯರೆ, ಗಡಿಯಾಚೆಯಲ್ಲಿ ಹೃದಯ ಪರಿವರ್ತನೆಯಾಗಿದೆ ಎಂಬ ಕೆಲವು ಕೃತ್ರಿಮ ಹೇಳಿಕೆಗಳನ್ನು ನಂಬಿ, ನಮ್ಮ ರಕ್ಷಣಾ ಸಿದ್ಧತೆಗಳನ್ನು ಸಡಿಲಿಸಲಾಗದು. ಈ ವಿಚಾರದಲ್ಲಿ ತಮ್ಮ ಅನಿಸಿಕೆಗಳನ್ನು ಸುತ್ತಿಬಳಸಿ ಕೆಲವು ಸನ್ಮಾನ್ಯ ಸದಸ್ಯರು ಹೇಳಿದ್ದಾರೆ ಹಾಗೂ ನೈಜ ಸ್ಥಿತಿಯ ಅರಿವು ನಮ್ಮೆಲ್ಲರಿಗೂ ಇದೆ, ಗಡಿಯಾಚೆಗಿನ ಪ್ರಚೋದನೆ ಹಾಗೂ ಸಮರ್ಥನೆಯಿಂದಲೇ ಆತಂಕವಾದದ ಸುಳಿಗೆ ನಾವು ಬಲಿಯಾಗುತ್ತಿದ್ದೇವೆ. ಮತ್ತೊಂದು ವಿಚಾರವೆಂದರೆ, ಗಡಿಯಾಚೆಗೆ ನಾವು ಯಾರೊಂದಿಗೆ ವ್ಯವಹರಿಸಬೇಕು ಎಂದು ಸ್ಪಷ್ಟವಾಗಿಲ್ಲ– ಅದು ಪಾಕಿಸ್ತಾನದ ಚುನಾಯಿತ ಸರ್ಕಾರವೇ, ಅಲ್ಲಿಯ ಬೇಹುಗಾರಿಕೆ ಸಂಸ್ಥೆಯಾದ ಐಎಸ್ಐ ಜೊತೆ ವ್ಯವಹರಿಸಬೇಕೆ ಅಥವಾ ಅಲ್ಲಿಯ ಸೇನಾ ಪ್ರಮುಖರೊಂದಿಗೆ ಮಾತುಕತೆ ನಡೆಸಬೇಕೆ; ಸರ್ಕಾರದ ಹೊರಗೆ ಹಲವು ಭಯೋತ್ಪಾದನೇ ಸಂಘಟನೆಗಳೂ ಸಹ ಅಲ್ಲಿ ಸಕ್ರಿಯ ಪಾತ್ರ ವಹಿಸುತ್ತವೆ. ಹೀಗಿರುವುದರಿಂದಲೇ, ಅಲ್ಲಿರುವ ವಿಭಿನ್ನ ಶಕ್ತಿ ಮೂಲಗಳು ಬಹುಶಃ ಒಂದೇ ದಿಕ್ಕಿನಲ್ಲಿ ಚಲಿಸುತ್ತಿವೆ ಅಥವಾ ಬಹುಶಃ ವಿಭಿನ್ನ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗಿವೆ ಎಂದೆನಿಸುತ್ತದೆ. ಆದ್ದರಿಂದಲೇ, ನಾವು ಆತಂಕವಾದದ ನೇರ ಪ್ರಭಾವಕ್ಕೆ ಒಳಗಾಗಿರುವುದರಿಂದ ಹಾಗೂ ಸ್ಥಳೀಯ ಸಮೂಹಗಳಿಗೆ ಗಡಿಯಾಚೆಯಿಂದ ಸಮರ್ಥನೆ ದೊರೆಯುತ್ತಿರುವುದರಿಂದ, ಯಾವುದೇ ಕಾರಣಕ್ಕು ನಮ್ಮ ರಕ್ಷಣಾ ವ್ಯವಸ್ಥೆಯನ್ನು ಸಡಿಲಿಸುವ ಪ್ರಶ್ನೆಯಿಲ್ಲ. ಆತಂಕವಾದವು ಪಶ್ಚಿಮ ಗಡಿಯಿಂದ ಅಥವಾ ಬಾಂಗ್ಲಾದೇಶ ಮಾರ್ಗವಾಗಿ, ಇಲ್ಲವೇ ನೇಪಾಳದ ಮೂಲಕ ನುಸುಳಬಹುದು. ಇವುಗಳು ಗುಪ್ತಚರ್ಯೆಯನ್ನು ಅವಲಂಬಿಸಿರುತ್ತದೆ. ಕೇಂದ್ರ ಗೃಹ ಸಚಿವಾಲಯ ಸಂಬಂಧಿಸಿದಂತೆ ಈ ಎಲ್ಲಾ ಮಾಹಿತಿ ಲಭ್ಯವಿರುತ್ತದೆ. ತಮ್ಮ ಜನರೊಂದಿಗೆ ಒಗ್ಗಟ್ಟು ತೋರಲು, ಆತಂಕವಾದದ ಆರೋಪ ಹೊತ್ತಿರುವವರ ಹಳ್ಳಿಗಳಿಗೆ ಭೇಟಿ ಕೊಡುವ ಪ್ರಸಂಗಗಳು ನಡೆದ ಹಿನ್ನಲೆಯಲ್ಲಿ, ಯಾವುದೇ ಬಗೆಯ ಆತಂಕವಾದಕ್ಕೆ ಬೆಂಬಲ ವ್ಯಕ್ತಪಡಿಸಿದರೂ, ಆತಂಕವಾದದ ಸಮರದಲ್ಲಿ ನಮ್ಮ ಧೃಢ ನಿಶ್ಚಯ ದುರ್ಬಲವಾಗುತ್ತದೆ. ನಮ್ಮ ಅರೆಸೇನಾ ಪಡೆ ಸೈನಿಕರು ಹಾಗೂ ನಮ್ಮ ಪೋಲೀಸರು ಆತಂಕವಾದದ ಸಮರದಲ್ಲಿ ಹುತಾತ್ಮರಾದಾಗಲೂ, ನಾವು ಅಂತಹ ಘಟನೆಗಳ ಸತ್ಯಾಸತ್ಯತೆಯನ್ನು ಪ್ರಶ್ನಿಸುತ್ತೇವೆ. ಈ ರೀತಿ ದೆಹಲಿಯಲ್ಲೇ ಆಗಿದೆ. ನಮ್ಮ ವೋಟ್ ಬ್ಯಾಂಕ್ ಭದ್ರ ಪಡಿಸಲು, ಆತಂಕವಾದದ ವಿರುದ್ಧದ ಸಮರವನ್ನೇ ನಾವು ಪ್ರಶ್ನಿಸಲು ಆರಂಭಿಸಿದರೆ ಯಾವುದೇ ಪುರುಷಾರ್ಥ ಸಾಧಿಸಿದಂತಾಗದು ಎಂದು ನಾವು, ಅದರಲ್ಲೂ ವಿಶೇಷವಾಗಿ ರಾಜಕಾರಣಿಗಳು ಅರ್ಥ ಮಾಡಿಕೊಳ್ಳಬೇಕು.

ಒಂದು ಪ್ರಮುಖ ಅಂಶವೆಂದರೆ, ನಾನು ಹೇಳಬಯಸುವ ಎಲ್ಲಾ ಪ್ರಮುಖ ಆಂಶಗಳಲ್ಲಿ ಕಡೆಯ ಅಂಶವಾದ ಇದನ್ನು ಗೃಹ ಸಚಿವರ ಅವಗಣನೆಗೆ ತರಬಯತ್ತೇನೆ. ನಮ್ಮ ದೇಶ ಪ್ರಬಲ ಗುಪ್ತಚರ್ಯೆ ಜಾಲವನ್ನು ಹೊಂದಿದೆ. ಇದೊಂದು ವೃತ್ತಿನಿರತ ಜಾಲವೆಂದು ನನ್ನ ನಂಬಿಕೆ. ದಯವಿಟ್ಟು, ನಮ್ಮ

ಗುಪ್ತಚರ್ಯೆ ಇಲಾಖೆಯನ್ನು ವಿಶೇಷವಾಗಿ ರಾಷ್ಟ್ರದ ಭದ್ರತೆಗೆ ಬಳಸಬೇಕೆಂದು ನನ್ನ ವಿನಂತಿ. ಅತಿ ಆವಶ್ಯಕವಲ್ಲದ ಕಾರ್ಯಗಳಿಗೆ ಗುಪ್ತಚರ್ಯೆ ಇಲಾಖೆಯನ್ನು ಬಳಸುವ ಪರಿಪಾಠವನ್ನು ಸಂಪೂರ್ಣ ರೀತಿಯಿಂದ ನಿಲ್ಲಿಸಲು ಸಾಧ್ಯವಾಗದ ಪಕ್ಷದಲ್ಲಿ, ಕನಿಷ್ಠ ಪ್ರಮಾಣಕ್ಕೆ ಇಳಿಸುವ ಪ್ರಯತ್ನ ನಡೆಯಬೇಕಿದೆ. ಭಾರತವು ವಿದ್ರೋಹ ಮತ್ತು ಆತಂಕವಾದದ ಭೀಕರ ಸುಳಿಯಲ್ಲಿ ಸಿಲುಕಿರುವ ಈ ಸಂದರ್ಭದಲ್ಲಿ, ಕೇಂದ್ರ ಹಾಗೂ ರಾಜ್ಯಗಳ ಗುಪ್ತಚರ್ಯೆ ವಿಭಾಗ ಅಥವಾ ಇಲಾಖೆಗಳು ಅರೆ ರಾಜಕೀಯ ಬೇಹುಗಾರಿಕೆಯಲ್ಲಿ ಅತಿಯಾದ ಸಮಯ ಕಳೆದರೆ, ಅದು ರಾಷ್ಟ್ರೀಯ ಸಂಪನ್ಮೂಲದ ವ್ಯರ್ಥ ಬಳಕೆ ಎಂದು ನನ್ನ ಅನಿಸಿಕೆ. ಈಶಾನ್ಯ ಪ್ರಾಂತ್ಯ ಸಮಸ್ಯೆಯೆದುರಿಸುತ್ತಿದೆ. ಉತ್ತರದಲ್ಲಿ, ಕಾಶ್ಮೀರ ವಿವಾದವಿದೆ. ಗಡಿಯಾಚೆಗಿನ ಕುಮ್ಮಕ್ಕು ಮತ್ತೊಂದು ವಿಚಾರ. ದೇಶದ ಹೃದಯ ಭಾಗದಲ್ಲಿ ಮಾವೋವಾದಿಗಳ ಉಪಟಳ ಹೆಚ್ಚಿದೆ. ಆದ ಕಾರಣ, ಗುಪ್ತಚರ್ಯೆ ವಿಭಾಗವನ್ನು ಭದ್ರತಾ ಸುವ್ಯವಸ್ಥೆ ಕೆಲಸ ಕಾರ್ಯಗಳಿಗೆ ಹೆಚ್ಚಿಗೆ ಬಳಸುವ ಮತ್ತು ರಾಜಕೀಯ ಮುಕ್ತಗೊಳಿಸುವ ಅವಶ್ಯಕತೆ ಎದ್ದುಕಾಣುತ್ತಿದೆ. ಮಾನ್ಯ ಸಚಿವರಿಗೆ ನನ್ನ ಕಡೆಯ ಸಲಹೆಯೆಂದರೆ, ನಿನ್ನೆ ಸಂಭವಿಸಿದ ಬಾಂಬ್ ಧಾಳಿ ನೀಡುವ ಎಚ್ಚರಿಕೆಯೆಂದರೆ ಆತಂಕವಾದದ ನಮ್ಮ ಸಮರ ಅವ್ಯಾಹತವಾಗಿ ಮುಂದುವರಿಯಬೇಕಿದೆ. ನನ್ನ ಕೆಲವು ಸ್ನೇಹಿತರು ಬಳಸಿದ ಪದವನ್ನು ಬಳಸುವುದಾದರೆ, ಅಡ್ಡಿ ಆತಂಕವಿಲ್ಲದೆ ಮುನ್ನಡೆಯಬೇಕಿದೆ. ಯಾವುದೇ ಕಾರಣಕ್ಕು ನಾವು ನಮ್ಮ ರಕ್ಷಣಾ ವ್ಯವಸ್ಥೆಯನ್ನು ಸಡಿಲಿಸುವಂತಿಲ್ಲ, ಹೀಗಾದರೆ, ಆತಂಕವಾದಿಗಳು ಮೇಲುಗೈ ಸಾಧಿಸುತ್ತಾರೆ. ರಾಷ್ಟ್ರೀಯ ಸಾರ್ವಭೌಮತೆಯ ಹಿತದೃಷ್ಟಿಯಿಂದ ನಮ್ಮ ಸಮರ ಯಾವುದೇ ಕಾರಣಕ್ಕು ನಿಲ್ಲುವುದಿಲ್ಲ, ಇದಕ್ಕೆ ಅಡೆತಡೆ ಒಡ್ಡುವುದಿಲ್ಲ ಎಂಬ ವಿಶ್ವಾಸವನ್ನು ಗೃಹ ಸಚಿವರು ಈ ಚರ್ಚೆಯ ನಂತರ ಸದನಕ್ಕೆ ನೀಡಬೇಕು.